{xelp}

May 27, 2019

To

| BSE Limited<br>Department of Corporate Services<br>Listing Department<br>P J Towers,<br>Dalal Street,<br>Mumbai - 400001<br>*Scrip Code: 542367* | National Stock Exchange of India Limited<br>Listing Department,<br>Exchange Plaza, Plot no. C/1,<br>G Block, Bandra-Kurla Complex,<br>Bandra (E), Mumbai - 400051<br>*Scrip Symbol: XELPMOC* |
|---|---|

Dear Sir/Madam,

**Sub: Intimation under Regulation 47(3) of SEBI (Listing Obligations and Disclosure Requirements) Regulations, 2015**

In accordance with Regulation 47(3) of the Securities and Exchange Board of India (Listing Obligations and Disclosure Requirements) Regulations, 2015 ("*SEBI LODR*"), please find enclosed herewith copy of advertisements giving information of the financial results as specified in Regulation 33 of SEBI LODR.

The above mentioned advertisement is published in Financial Express (English Newspaper) & Hosadigantha (Kannada Newspaper) on May 26, 2019.

The same has also been uploaded on the Company's website which may be viewed at https://www.xelpmoc.in/investorrelations.

Kindly take the same on record.

Thanking you,

Yours faithfully,

**For Xelpmoc Design And Tech Limited**

XELPMOC DESIGN AND TECH LIMITED

**Vaishali Kondbhar**
**Company Secretary**
**Encl: As above**

### ಜನ-ಜಾನುವಾರುಗಳು ನೀರಿಗಾಗಿ ಪರದಾಟ | ಕಾಡು ಪ್ರಾಣಿಗಳಿಗೂ ಕುಡಿಯಲು ನೀರಿಲ್ಲ

# ಬತ್ತಿಹೋದ ಕೆರೆ ಕಟ್ಟೆಗಳು; ಜನರಲ್ಲಿ ಅತಂಕ

◆ ಎಂ.ಶಿವಕುಮಾರ್

ದಿಗಂತ ವಿಶೇಷ

**ಮಳವಳ್ಳಿ:** ಪಟ್ಟಣದ ದೊಡ್ಡಕೆರೆ ಹಾಗೂ ಮಾರೆಹಳ್ಳಿ ಕೆರೆ ಸೇರಿದಂತೆ ಕಲ್ಕುಣಿ, ಮಿಕ್ಕೆರೆ, ವಡ್ಡರಹಳ್ಳಿ, ಚೊಟ್ಟನಹಳ್ಳಿ, ಬಿ.ಜಿ.ಪುರ ಹಲಗೂರು ಸೇರಿದಂತೆ ಗ್ರಾಮದಲ್ಲಿರುವ ಕೆರೆ ಕಟ್ಟೆಗಳು ತೀವ್ರತರ ಬರಕ್ಕೆ ನೀರಿಲ್ಲದೆ ಬತ್ತಿ ಹೋಗುತ್ತಿರುವುದರಿಂದ ಜನರಲ್ಲಿ ನೀರಿನ ಅಭಾವ ಸನ್ನಿಹತವಾಗುವ ಎಲ್ಲ ಲಕ್ಷಣಗಳು ಹೆಚ್ಚಾಗಿವೆ.

ಈಗಾಗಲೇ ಕಾಡಿನಲ್ಲಿ ತೀವ್ರತರ ಬರದಿಂದ ಒಣಗಿರುವ ಮರಗಳು ಒಂದಕ್ಕೊಂದು ಸ್ಪರ್ಶ ಗೊಂಡು ಬೆಂಕಿ ಹತ್ತಿಕೊಂಡು ಅರಣ್ಯ ಪ್ರದೇಶ ಸುಟ್ಟು ಕರಕಲಾಗುತ್ತಿದೆ. ಇದರಿಂದ ಪ್ರಾಣಿಗಳು ನೀರಿಲ್ಲದೆ ಆಹಾರವಿಲ್ಲದೆ ಅಹಾರ -ನೀರಿಗಾಗಿ ನಾಡಿಗೆ ಬರುತ್ತಿರು ವುದು ಹೆಚ್ಚಾಗಿದೆ.ಈ ನಡುವೆ ಪಟ್ಟಣ ಸೇರಿದಂತೆ ಗ್ರಾಮದಲ್ಲಿರುವ ಕೆರೆ-ಕಟ್ಟೆಗಳು ಬತ್ತಿಹೋಗುತ್ತಿರುವುದು ಜನರ ಅತಂಕಕ್ಕೆ ಕಾರಣವಾಗಿದೆ.

**ಯೋಜನೆಗಳು ಭ್ರಷ್ಟತೆ- ಮಣ್ಣುಪಾಲು:** ಅಂತರ್ಜಲ ವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳು ಮಣ್ಣು ಪಾಲಾಗಿವೆ ಎಂದರೆ ತಪ್ಪಾಗಲಾರದು. ದೊಡ್ಡಕೆರೆ, ಮಾರೆಹಳ್ಳಿ ಸೇರಿದಂತೆ ಹಲವು ಕೆರೆಗಳ ಹೂಳೆತ್ತುವುದರಲ್ಲಿ ನಡೆದ ಕಾಮಗಾರಿಯಲ್ಲಿನ ಭ್ರಷ್ಟತೆ ಹಾಗೂ ಈ ಯೋಜನೆಯ ಕಳಪೆ ಕಾಮ ಗಾರಿಗೆ ಸೂಕ್ತ ಕ್ರಮವಹಿಸದ ಅಧಿಕಾರಿಗಳ ನಿರ್ಲಕ್ಷತೆಯಿಂದ ಇಂದು ದೊಡ್ಡಕೆರೆ ಮತ್ತು ಮಾರೆಹಳ್ಳಿ ಕೆರೆಗಳಿಗೆ ನೀರಿಲ್ಲದೆ ಒಣಗುವ ಪರಿಸ್ಥಿತಿ ಬಂದಿದೆ ಎನ್ನುವುದು ಸಾರ್ವಜನಿಕರ ಅರೋಪವಾಗಿದೆ.

**ನೀರಿನ ಸಮರ್ಪಕ ಸೇವೆಗೆ ಮುನ್ನೆಚ್ಚರಿಕೆ ಅವಶ್ಯ:** ಹೌದು ತೀವ್ರತರ ಬರದಿಂದ ನರಳುತ್ತಿರುವ ಜನರಿಗೆ ಹಾಗೂ ಜಾನುವಾರುಗಳ ರಕ್ಷಣೆಗೆ ತಾಲೂಕು ಆಡಳಿತ ಸೂಕ್ತ ಮುನ್ನೆಚ್ಚರಿಕೆ ಕ್ರಮವಹಿಸಬೇಕಿದೆ. ಈಗಾಗಲೇ ಜಾನುವಾರುಗಳ ನೀರು-ಮೇವಿಗೆ ಕೊರತೆಯುಂಟಾಗಿ ಜಾನುವಾರುಗಳು ಮಾಂಸಕ್ಕೆ ಮಾರಾಟವಾಗುತ್ತಿರುವುದು ಹೆಚ್ಚಾಗಿದೆ. ಕೂಡಲೇ ತಾಲೂಕು ಆಡಳಿತ ಜಾನುವಾರುಗಳ ಮೇವಿಗೆ ಹಾಗೂ ಕುಡಿಯುವ ನೀರಿಗಾಗಿ ಅಗತ್ಯ ಕ್ರಮವಹಿಸುವ ಮೂಲಕ ಮಾನವೀಯತೆ ಮೆರಯುವಂತೆ ಸುಣ್ಣದದೊಡ್ಡಿ ಗ್ರಾಮದ ಟೀ ಮೋದಿ ಅಭಿಮಾನಿ ಮಹೇಶ್ ತಾಲೂಕು ಆಡಳಿತಕ್ಕೆ ಸಲಹೆ ನೀಡಿದ್ದಾರೆ.

ಇದಲ್ಲದೆ ಕಾಡಿನಲ್ಲಿ ನೀರು-ಆಹಾರ ಕೊರತೆಯಿಂದ ಕಾಡು ಪ್ರಾಣಿಗಳು ನೀರಿಗಾಗಿ ನಾಡಿನತ್ತ ಬರುತ್ತಿವೆ. ಶಿಂಷಾ, ನೆಟ್ಕಲ್, ಹೆಬ್ಬಣಿ, ಮುತ್ತತ್ತಿ ಅರಣ್ಯ ಪ್ರದೇಶದಲ್ಲಿ ಆನೆಗಳು, ಜಿಂಕೆಗಳು, ಕೋತಿಗಳು ನೀರಿಲ್ಲದೆ ನಾಡಿನತ್ತ ಬರುತ್ತಿರುವ ಘಟನೆಗಳು ಸಹ ಹೆಚ್ಚಾಗಿವೆ, ಇದಕ್ಕೆ ಸಂಭಂದಿಸಿದ ಅಧಿಕಾರಿಗಳು ಸೂಕ್ತ ಕ್ರಮವಹಿಸಿ ಜೀವರಾಶಿಗಳು ನೀರುಣಿಸಲು ಅಗತ್ಯ ಕ್ರಮವಹಿಸುವಂತೆ ಮಹೇಶ್ ಈ ಸಂದರ್ಭದಲ್ಲಿ ಸಲಹೆ ನೀಡಿದ್ದಾರೆ.

**ಕಾದು ನೋಡಬೇಕಿದೆ:** ಇಷ್ಟೆಲ್ಲ ಸಮಸ್ಯೆಗಳು ಹೆಚ್ಚಾಗಿದ್ದರೂ ಸಹ ತಾಲೂಕು ಆಡಳಿತ ಕುರುಡಾಗಿರುವುದು ಶೋಚನೀಯ. ಇನ್ನಾದರೂ ಆಡಳಿತ ವ್ಯವಸ್ಥೆ ಕೂಡಲೇ ಎಚ್ಚೆತ್ತುಕೊಂಡು ಜನ ಜಾನುವಾರುಗಳಿಗೆ ನೀರು ಅಹಾರಕ್ಕಾಗಿ ಕ್ರಮವಹಿಸುವರೇ ಎಂಬುದನ್ನು ಕಾದು ನೋಡಬೇಕಿದೆ.



ಕಾಡಿನ ಪ್ರದೇಶದಲ್ಲಿ ತೀವ್ರತರ ಬರದಿಂದ ಮರಗಳು ಒಂದಕ್ಕೊಂದು ಸ್ಪರ್ಶಗೊಂಡು ಬೆಂಕಿ ಹತ್ತುಕೊಂಡು ಕರಕಲಾಗಿರುವ ದೃಶ್ಯ.

- ■ ನೀರಿಗೆ ತೊಂದರೆಯಾಗದಂತೆ ತಾಲೂಕು ಆಢಳಿತಕ್ಕೆ ಮುನ್ನೆಚ್ಚರಿಕೆ ಅವಶ್ಯ -ಮಹೇಶ್
- ■ ತಾಲೂಕಿನಲ್ಲಿ ನೀರು-ಮೇವಿಗಾಗಿ ಅಹಾಹಕಾರ-ಮೂಳೆ-ಮಾಂಸಕ್ಕಾಗಿ ಜಾನುವಾರುಗಳ ಮಾರಾಟ ಹೆಚ್ಚಳ

**ಜಾನುವಾರುಗಳ ಮಾರಾಟ ಹೆಚ್ಚಳ**

ತೀವ್ರತರ ಬರದಿಂದ ಸಂಕಷ್ಠದಲ್ಲಿರುವ ಜನರು ತಾವು ಸಾಕಿದ ಜಾನುವಾರುಗಳಿಗೆ ಮೇವು ನೀರು ನೀಡಲಾಗದೆ ಕಡುಕರಿಗೆ ಮಾತರಾಟ ಮಾಡುತ್ತಿರುವ ಘಟನೆಗಳು ಅದರಲ್ಲೂ ತಾಲೂಕಿನ ಕಿರುಗಾವಲಿನಲ್ಲಿ ಹೆಚ್ಚಾಗಿದೆ ಹಾಗೂ ಇಲ್ಲಿ ಸದಾ ನಿರಂತರವಾಗಿ ಗೋವುಗಳ ನರಹತ್ಯೆ ನಡೆಯುತ್ತಿರುವುದು ಸಹ ಹೆಚ್ಚಾಗಿದೆ.





**ನೀರಿಗಾಗಿ ಪರದಾಟ ಸನ್ನಿಹಿತ**

ಅದರಲ್ಲೂ ಹಳ್ಳಿಗಾಡಿನಲ್ಲಿ ನೀರಿನ ಸಮಸ್ಯೆ ಹೇಳತೀರದಾಗಿದೆ. ಈಗಾಗಲೇ ವಿದ್ಯುತ್ ಸಮಸ್ಯೆಯೂ ಹೆಚ್ಚಾಗಿದೆ, ಇತ್ತ ನೀರಿನ ಸಮಸ್ಯೆ ಉಲ್ಬಣಿಸುತ್ತಿದೆ, ಇನ್ನು ಮೂಲಭೂತ ಸೌಲಭ್ಯಗಳು ಮರಿಚಿಕೆಯಾಗಿವೆ. ಜನರು ಕೂಲಿ ಕೆಲಸವಿಲ್ಲದೆ. ಇತ್ತ ನೀರು ಇಲ್ಲದೆ ಪರದಾಡುತ್ತಿರುವ ಜನರು ಸೂಕ್ತ ಸೌಲಭ್ಯವಿಲ್ಲದೆ ಅಕ್ಕಪಕ್ಕದ ಜಮೀನಿನ ಬೋರ್‌ವೆಲ್ ಅಶ್ರಯ ಪಡೆದು ನೀರು ಕುಡಿಯುತ್ತಿರುವ ಘಟನೆಗಳು ಹೆಚ್ಚಾಗಿವೆ.


## ಕಿರು ಸುದ್ದಿ

### ಮೂವರು ಮಕ್ಕಳೊಂದಿಗೆ ಆತ್ಮಹತ್ಯೆಗೆ ಯತ್ನಿಸಿದ ಮಹಿಳೆಯ ರಕ್ಷಣೆ

**ಗೋಕಾಕ:** ತನ್ನ ಮೂವರು ಮಕ್ಕಳೊಂದಿಗೆ ಜಲಪಾತಕ್ಕೆ ಹಾರಿ ಆತ್ಮಹತ್ಯೆಗೆ ಮುಂದಾದ ಮಹಿಳೆಯೋರ್ವಳನ್ನ ಸ್ಥಳೀಯ ಯುವಕರು ರಕ್ಷಿಸಿ ಪೊಲೀಸ್ ಠಾಣೆಗೆ ಒಪ್ಪಿಸಿದ ಘಟನೆ ನಗರದ ಗೋಕಾಕ ಫಾಲ್ಸ್ ಬಳಿ ನಡೆದಿದೆ.

ಹುಕ್ಕೇರಿ ತಾಲೂಕಿನ ನಾಗರಮುನ್ನೊಳಿ ಗ್ರಾಮದ ಮಹಿಳೆಯೊಬ್ಬಳು ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯರೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳುವ ಸಂದರ್ಭದಲ್ಲಿ ಧುಪದಾಳ ಗ್ರಾಮದ ಯುವಕರಾದ ರಮೇಶ ಗಾಡಿವಡ್ಡರ ಹಾಗೂ ಪರಶುರಾಮ ಗಾಡಿವಡ್ಡರ ಎಂಬುವರು ಮಹಿಳೆ ಹಾಗೂ ಮಕ್ಕಳನ್ನ ರಕ್ಷಿಸಿದ್ದಾರೆ. ಕೂಡಲೇ ಕರವೇ ಸಂಘಟನೆ ಸಹಾಯದೊಂದಿಗೆ ಘಟಪ್ರಭಾ ಪೊಲೀಸ್ ಠಾಣೆಗೆ ಸಂಪರ್ಕಿಸಿದ್ದಾರೆ. ನಂತರ ಆತ್ಮಹತ್ಯೆಗೆ ಯತ್ನಿಸಿದಅವರನ್ನ ಅವರ ಸಂಬಂಧಿಕರಿಗೆ ಒಪ್ಪಿಸಲಾಗಿದೆ ಎಂದು ಘಟಪ್ರಭಾ ಪೊಲೀಸರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಧುಪದಾಳ ಗ್ರಾಪಂ ಸದಸ್ಯ ವಿಠ್ಠಲ ಗಾಡಿವಡ್ಡರ, ಕರವೇ ಕಾರ್ಯಕರ್ತರಾದ ರೇಹಮಾನ ಮೊಕಾಶಿ, ಅಜಿತ ಮಲ್ಲಾಪೂರಿ, ಅಮೀರಖಾನ್ ಜಗದಾಳ, ರವಿ ನಾವಿ, ವಸಂತ ನಾವಿ ಸೇರಿದಂತೆ ಪೋಲಿಸ್ ಸಿಬ್ಬಂದಿ ಇದ್ದರು.



## ಕಣಿವೆ ರಾಜ್ಯದಲ್ಲಿ ಬಿಜೆಪಿ ದಾಖಲೆ

**ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದಲ್ಲಿ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಮೂರು ಸ್ಥಾನ ತನ್ನದಾಗಿಸಿಕೊಂಡಿರುವ ಬಿಜೆಪಿ ಕಣಿವೆ ರಾಜ್ಯದಲ್ಲಿ ಶೇ.46.4ರಷ್ಟು ಮತಹಂಚಿಕೆ ಪಡೆಯುವ ಮೂಲಕ ದಾಖಲೆ ಸೃಷ್ಟಿಸಿದೆ.

ಈ ಕುರಿತು ಚುನಾವಣಾ ಆಯೋಗ ಅಧಿಕೃತ ದತ್ತಾಂಶ ಬಿಡುಗಡೆಗೊಳಿಸಿದ್ದು, 34.7ಲಕ್ಷ ಮತಗಳ ಪೈಕಿ ಬರೋಬ್ಬರಿ 16.48 ಲಕ್ಷ ಮತಗಳನ್ನು ಪಡೆದಿರುವ ಬಿಜೆಪಿ ಅತ್ಯಂತ ಹೆಚ್ಚು ಮತ ಪಡೆದಿರುವ ಪಕ್ಷವಾಗಿ ಹೊರಹೊಮ್ಮಿದೆ. ಮತ್ತೊಂದೆಡೆ ಮೂರು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿರುವ ನ್ಯಾಷನಲ್ ಕಾನ್ಫರೆನ್ಸ್ ಕೇವಲ ಶೇ.7.89 ಮತ ಹಂಚಿಕೆಗೆ ತೃಪ್ತಿ ಪಟ್ಟುಕೊಳ್ಳಬೇಕಾಯಿತು ಎಂದು ತಿಳಿದುಬಂದಿದೆ.

ಜಮ್ಮು, ಉದಾಮ್‌ಪುರ ಮತ್ತು ಲಡಾಖ್ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿರುವ ಬಿಜೆಪಿ 27 ವಿಧಾನಸಭಾ ಕ್ಷೇತ್ರಗಳಲ್ಲಿ ತನ್ನ ಪ್ರಾಬಲ್ಯ ಸಾಧಿಸುವಲ್ಲಿ ಯಶಸ್ವಿಯಾಗಿದೆ. 2014ರ ಲೋಕಸಭೆ ಚುನಾವಣೆಗೆ ಹೋಲಿಸಿದರೆ ಈ ಬಾರಿ ಶೇ.12ರಷ್ಟು ಮತಹಂಚಿಕೆ ಪ್ರಮಾಣ ಏರಿಕೆಯಾಗಿದೆ. ದತ್ತಾಂಶಗಳ ಪ್ರಕಾರ ಕಳೆದ ಚುನಾವಣೆಯಲ್ಲಿ ಬಿಜೆಪಿ ಶೇ.23ರಷ್ಟು ಮತಹಂಚಿಕೆ ಪಡೆದಿತ್ತು. 2009ರ ಲೋಕಸಭೆ ಚುನಾವಣೆಯಲ್ಲಿ ಈ ಪ್ರಮಾಣ ಕೇವಲ 18.61ರಷ್ಟಿತ್ತು. ಉದಾಮ್‌ಪುರ ಲೋಕಸಭಾ ಕ್ಷೇತ್ರದಲ್ಲಿ ಕೇಂದ್ರ ಸಚಿವ ಜಿತೇಂದ್ರ ಸಿಂಗ್ ತಮ್ಮ ಕಾಂಗ್ರೆಸ್ ಪ್ರತಿಸ್ಪರ್ಧಿ ವಿಕ್ರಮಾದಿತ್ಯ ಸಿಂಗ್ ಅವರ ವಿರುದ್ಧ 3.57ಲಕ್ಷ ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ. ಚುನಾವಣಾ ಆಯೋಗ ನೀಡಿರುವ ವರದಿ ಪ್ರಕಾರ ಜಿತೇಂದ್ರ ಸಿಂಗ್ ಜಮ್ಮು-ಕಾಶ್ಮೀರದಲ್ಲಿ ಅತಿ ಹೆಚ್ಚು ಮತಗಳ ಅಂತರದಲ್ಲಿ ಗೆಲುವು ಸಾಧಿಸಿರುವ ಏಕೈಕ ಅಭ್ಯರ್ಥಿಯಾಗಿದ್ದಾರೆ. ಇವರು 7.24ಲಕ್ಷ ಮತಗಳನ್ನು ಪಡೆಯುವ ಮೂಲಕ ಶೇ.61.28ರಷ್ಟು ಮತಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಜಮ್ಮು-ಕಾಶ್ಮೀರದ ಐದು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್ ಶೇ.28.5ರಷ್ಟು ಮತಹಂಚಿಕೆ ಪ್ರಮಾಣ ದಾಖಲಾದರೂ ಈ ಬಾರಿ ಎಲ್ಲಾ ಸ್ಥಾನಗಳನ್ನು ಕಳೆದುಕೊಂಡಿದೆ. ಕಳೆದ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್ ಶೇ.22.90ರಷ್ಟು ಮತಹಂಚಿಕೆ ಪಡೆದಿತ್ತು. ಅಷ್ಟೇ ಅಲ್ಲದೇ 2014ರಲ್ಲಿ ಶೇ.20.50ರಷ್ಟು ಮತಹಂಚಿಕೆ ಪಡೆದಿದ್ದ ಮೆಹಬೂಬಾ ಮುಫ್ತಿ ನೇತೃತ್ವದ ಪೀಪಲ್ಸ್ ಡೆಮಾಕ್ರಟಿಕ್ ಪಕ್ಷ (ಪಿಡಿಪಿ) ಈ ಬಾರಿ ಶೇ.2.4ರಷ್ಟು ಇಳಿಕೆ ಕಂಡಿದೆ. ರಾಜ್ಯದಲ್ಲಿ ಸ್ವತಂತ್ರ ಅಭ್ಯರ್ಥಿಗಳು ಶೇ. 12.2ರಷ್ಟು ಮತಹಂಚಿಕೆ ಪಡೆದಿದ್ದಾರೆ.

**ಪ್ರಮಾಣ(%)**
- ◆ ಬಿಜೆಪಿ: 46.4
- ◆ ಕಾಂಗ್ರೆಸ್: 28.5
- ◆ ಎನ್‌ಸಿ: 7.89
- ◆ ಪಿಡಿಪಿ: 18.1

# ಮೋದಿ ಅಲೆಗೆ ಕೈ ದಳ ಕೋಟೆ ನುಚ್ಚುನೂರು

◆ ರಘುಪತಿ ಯಾಜಿ

**ಹುಬ್ಬಳ್ಳಿ:** ಮೋದಿ ಅಲೆ, ಬಿಜೆಪಿ ಪರವಾಗಿ ಮೇಲ್ವರ್ಗದ ಮತಗಳ ಸಂಪೂರ್ಣ ಕ್ರೋಡೀಕರಣ, ಕುರುಬರ ಹೊರತಾಗಿ ಹಿಂದುಳಿದ ವರ್ಗಗಳ ಮತಗಳು ಬಿಜೆಪಿಯತ್ತ ವಾಲಿದ್ದು , ಮೀಸಲು ಕ್ಷೇತ್ರದಲ್ಲಿ ಬಿಜೆಪಿ ಅದ್ಭುತ ಪ್ರದರ್ಶನ, ಅಲ್ಪಸಂಖ್ಯಾತರ ನಿರುತ್ಸಾಹ , ಬರ ಪರಿಶೀಲನೆಗೆ ಮುಖ್ಯಮಂತ್ರಿ ಕುಮಾರಸ್ವಾಮಿ ಒಂದು ದಿನವೂ ಬಾರದೆ ಇರುವುದು, ಮೈತ್ರಿ ಪಕ್ಷಗಳ ಕಿತ್ತಾಟ ಜೆಡಿಎಸ್ ಹಾಗೂ ಕಾಂಗ್ರೆಸ್ ಧೂಳೀಪಟವಾಗಲು ಪ್ರಮುಖ ಕಾರಣಗಳು.

ಇವು ಉತ್ತರ ಕರ್ನಾಟಕ , ಕರಾವಳಿ ಹಾಗೂ ಮಧ್ಯ ಕರ್ನಾಟಕದಲ್ಲಿ ಬಿಜೆಪಿ ಎಲ್ಲ 17 ಕ್ಷೇತ್ರಗಳಲ್ಲಿಯೂ ಭರ್ಜರಿ ಜಯಗಳಿಸಲು ಕಾರಣವಾಗಿ ಜೆಡಿಎಸ್-ಕಾಂಗ್ರೆಸ್ ಮೈತ್ರಿ ಪಕ್ಷಗಳನ್ನು ಸಂಪೂರ್ಣ ಗುಡಿಸಿ ಹಾಕಿವೆ. ಹಳೆ ಮೈಸೂರು ಕ್ಷೇತ್ರಗಳಲ್ಲಿ ಬೆಂಗಳೂರು ಗ್ರಾಮಾಂತರ ಹಾಗೂ ಹಾಸನ ಹೊರತು ಪಡಿಸಿ ಉಳಿದೆಲ್ಲ ಕ್ಷೇತ್ರಗಳಲ್ಲಿಯೂ ಮೈತ್ರಿ ಪಕ್ಷಗಳು ನೆಲಕಚ್ಚಿವೆ.

**ಮೀಸಲು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶೂನ್ಯ ಸಂಪಾದನೆ..:** ಈಸಲದ ಲೋಕಸಭೆ ಚುನಾವಣೆಯ ಮತ್ತೊಂದು ವಿಶೇಷವೆಂದರೆ ರಾಜ್ಯದ ಏಳು ಮೀಸಲು ಲೋಕಸಬಾ ಕ್ಷೇತ್ರದಲ್ಲಿ ಎಲ್ಲದರಲ್ಲಿಯೂ ಬಿಜೆಪಿ ಜಯಸಾಧಸಿರುವುದು. 2014ರ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ 9 ಸ್ಥಾನಗಳನ್ನು ಗೆಲ್ಲಲು ಈ ಮೀಸಲು ಕ್ಷೇತ್ರಗಳು ಬಹುದೊಡ್ಡ ಕೊಡುಗೆ ನೀಡಿದ್ದವು. ಕಲಬುರಗಿ, ವಿಜಯಪುರ, ರಾಯಚೂರು, ಬಳ್ಳಾರಿ, ಚಿತ್ರದುರ್ಗ, ಕೋಲಾರ ಹಾಗೂ ಚಾಮರಾಜ ನಗರ ಈ ಏಳು ಮೀಸಲು ಕ್ಷೇತ್ರಗಳಲ್ಲಿ ಬಳ್ಳಾರಿ ಹೊರತು ಪಡಿಸಿ 5ರಲ್ಲಿ ಕಾಂಗ್ರೆಸ್ ಜಯಸಾಧಿಸಿತ್ತು. ಈಸಲ ಏಳಕ್ಕೆ ಏಳೂ ಕ್ಷೇತ್ರಗಳಲ್ಲಿಯೂ ಬಿಜೆಪಿ ಜಯಸಾಧಿಸಿ ಕಾಂಗ್ರೆಸ್‌ಗೆ ದೊಡ್ಡಪೆಟ್ಟು ನೀಡಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಮೀಸಲು ಕ್ಷೇತ್ರಗಳಲ್ಲಿ ನಿರೀಕ್ಷಿತ ಸಾಧನೆ ಮಾಡದ ಕಾರಣ ರಾಜ್ಯದಲ್ಲಿ ಅಧಿಕಾರದಿಂದ ದೂರ ಇರುವಂತಾಗಿತ್ತು. ಕೇಂದ್ರ ಸಚಿವರಾಗಿದ್ದ ಅನಂತಕುಮಾರ ಹೆಗಡೆ ಒಂದು ಸಂದರ್ಭದಲ್ಲಿ ಸಂವಿಧಾನದ ಕುರಿತು ಮಾತನಾಡಿದ್ದನ್ನೇ ದೊಡ್ಡ ವಿಷಯವನ್ನಾಗಿ ಕಾಂಗ್ರೆಸ್ ಬಹುದೊಡ್ಡ ಚುನಾವಣಾ ವಿಷವನ್ನಾಗಿ ಮಾಡಿದ್ದು ಮೀಸಲು ಕ್ಷೇತ್ರಗಳಲ್ಲಿ ಸ್ವಲ್ಪಮಟ್ಟಿಗೆ ಬಿಜೆಪಿಗೆ ಹಿನ್ನಡೆಯಾಗಲು ಕಾರಣವಾಗಿತ್ತು. ಆದರೆ ಕೇವಲ ಒಂದು ವರ್ಷದಲ್ಲಿಯೇ ಇಲ್ಲಿ ಎಲ್ಲವೂ ಉಲ್ಟಾ ಆಗಿದೆ. ಲೋಕಸಭೆ ಚುನಾವಣೆಯಲ್ಲಿಯೂ ಕಾಂಗ್ರೆಸ್ ಇದೇ ವಿಷಯವನ್ನು ಪ್ರಮುಖವಾಗಿ ಪ್ರಸ್ತಾಪಿಸುತ್ತ ಬಂತು. ಆದರೆ ಈ ನೆಗೆಟಿವ್ ಕ್ಯಾಂಪೇನ್ ಅದಕ್ಕೆ ಮುಳುವಾಯಿತು. ಹೀಗಾಗಿ ಕಾಂಗ್ರೆಸ್ 2014ರಲ್ಲಿ ಗೆದ್ದಿದ್ದ ಐದು ಕ್ಷೇತ್ರಗಳನ್ನು ಕಳೆದುಕೊಂಡು ಶೂನ್ಯಕ್ಕೆ ಇಳಿಯಿತು. ಬಿಜೆಪಿ ಸಂಖ್ಯೆ ಕರ್ನಾಟಕದಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಲು ಮೀಸಲು ಕ್ಷೇತ್ರದ ಕೊಡುಗೆ ದೊಡ್ಡದಿದೆ.



**ಬಿಜೆಪಿಗೆ ಸಂಪೂರ್ಣ ವಾಲಿದ ಲಿಂಗಾಯತ ಸಮುದಾಯ :** ಈ ಚುನಾವಣೆಯ ಮತ್ತೊಂದು ವಿಶೇಷವೆಂದರೆ ಉತ್ತರ ಕರ್ನಾಟಕ ಹಾಗೂ ಮಧ್ಯ ಕರ್ನಾಟಕದಲ್ಲಿ ಬಹುದೊಡ್ಡ ಲಿಂಗಾಯತ ಸಮುದಾಯ ನೂರಕ್ಕೆ ನೂರರಷ್ಟು ಬಿಜೆಪಿ ಕಡೆ ವಾಲಿದ್ದು. ಈ ಕಾರಣಕ್ಕಾಗಿಯೇ ಲಿಂಗಾಯತ ಬಾಹುಳ್ಯವಿರುವ ಪ್ರದೇಶಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಲಕ್ಷಕ್ಕಿಂತ ಹೆಚ್ಚು ಮತಗಳಿಂದ ಜಯಿಸಿದ್ದಾರೆ. ದಾವಣಗೆರೆ, ಕೊಪ್ಪಳ, ಬೆಳಗಾವಿ, ಚಿಕ್ಕೋಡಿ, ಬಾಗಲಕೋಟೆ, ವಿಜಯಪುರ, ರಾಯಚೂರು, ಕಲಬುರಗಿ, ಬೀದರ ,ಹಾವೇರಿ, ಶಿವಮೊಗ್ಗ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಭರ್ಜರಿ ಜಯ ದಾಖಲಿಸಿದ್ದಾರೆ.

**ಒಕ್ಕಲಿಗರ ಪ್ರಾಬಲ್ಯ ಕ್ಷೇತ್ರದಲ್ಲಿಯೂ ಮೋದಿ ಅಲೆ:** ಒಕ್ಕಲಿಗರು ಪ್ರಾಬಲ್ಯವಿರುವ ಮೈಸೂರು ಕರ್ನಾಟಕ ಭಾಗದಲ್ಲಿ ಬಿಜೆಪಿಯ ಭರ್ಜರಿ ಸಾಧನೆಗೆ ಪ್ರಮುಖವಾಗಿ ಮೋದ ಅಲೆ ಹಾಗೂ ಮೈತ್ರಿ ಸರ್ಕಾರದ ಕಿತ್ತಾಟವೇ ಕಾರಣ. ಕಳೆದ ಸಲ ಬೆಂಗಳೂರಿನಲ್ಲಿ ಮೂರು ಕ್ಷೇತ್ರ ಹಾಗೂ ಮೈಸೂರಿನಲ್ಲಿ ಮಾತ್ರ ಜಯಗಳಿಸಿತ್ತು. ಈಸಲ ಹೆಚ್ಚುವರಿಯಾಗಿ ತುಮಕೂರು ಹಾಗೂ ಚಾಮರಾಜ ನಗರದಲ್ಲಿಯೂ ಕಮಲ ಅರಳಿದೆ.

**ಕುರುಬರಿಗೆ ಅತಿ ಮಹತ್ವದಿಂದ ಮೈತ್ರಿಗೆ ಮುಳುವು..?:** ಉತ್ತರ ಕರ್ನಾಟಕ ಹಾಗೂ ಮಧ್ಯ ಕರ್ನಾಟಕದಲ್ಲಿ ಅಲ್ಪಸಂಖ್ಯಾತರಿಗೆ ಒಂದೇ ಸೀಟುಗಳನ್ನು ನೀಡದ ಕಾಂಗ್ರೆಸ್ ಇದೇ ವೇಳೆ ಸಿದ್ದರಾಮಯ್ಯ ಹೇಳಿದಂತೆ ಮೂವರು ಕುರುಬ ಸಮಾಜದ ಟಿಕೆಟ್ ಕೊಟ್ಟಿದ್ದು ಹಾಗೂ ಟಿಕೆಟ್ ಸಿಕ್ಕಮೇಲೆ ಅಷ್ಟಕ್ಕೆ ಸುಮ್ಮನಾಗದ ಸಿದ್ದರಾಮಯ್ಯ ತಾನು ಕುರುಬ ಸಮುದಾಯಕ್ಕೆ ರಾಜ್ಯದಲ್ಲಿ ಮೂರು ಟಿಕೆಟ್ ಕೊಡಿಸಿದ್ದೇನೆ, ಬಿಜೆಪಿ ಈಶ್ವರಪ್ಪ ಅವರಿಗೆ ತಾಕತ್ತಿದ್ದರೆ ಕೊಡಿಸಲಿ, ಇದು ಅವರಿಂದ ಸಾಧ್ಯವೇ ಎಂದು ಪ್ರಚಾರಕ್ಕೆ ಹೋದಲ್ಲೆಲ್ಲ ಸವಾಲು ಹಾಕುತ್ತ ಹೋಗಿದ್ದು ಕೂಡ ಇತರೆ ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತರ ಒಳಬೇಗುದಿಗೆ ಕಾರಣವಾಯಿತು.

**ಬರಗಾಲ ಪ್ರದೇಶಕ್ಕೆ ಬಾರದ ಸಿಎಂ ಮತ್ತು ಡಿಸಿಎಂ**

ರಾಜ್ಯದ ಮೈತ್ರಿ ಪಕ್ಷಗಳ ಬಗ್ಗೆ ಮತದಾರರು ಮುನಿಸಿಕೊಳ್ಳಲು ಮತ್ತೊಂದು ಪ್ರಮುಖ ಕಾರಣ ತೀವ್ರ ಬರಗಾಲವನ್ನು ಮೈತ್ರಿ ಸರ್ಕಾರ ಕಡೆಗಣಿಸಿದ್ದು. ಉತ್ತರ ಕರ್ನಾಟಕದ 12 ಜಿಲ್ಲೆಗಳಲ್ಲಿ ತೀವ್ರ ಬರಗಾಲ ಸಂಭವಿಸಿ ಕುಡಿಯುವ ನೀರಿನ ತುಟಾಗ್ರತೆ ಎದುರಾದರೂ ಮುಖ್ಯಮಂತ್ರಿ ಕುಮಾರಸ್ವಾಮಿ ಹಾಗೂ ಉಪಮುಖ್ಯಮಂತ್ರಿ ಡಾ.ಪರಮೇಶ್ವರ ನಾಮಕಾವಾಸ್ತೆಗೂ ಈ ಪ್ರದೇಶಗಳಿಗೆ ಭೇಟಿ ನೀಡಲಿಲ್ಲ. ತಮ್ಮ ಮಗನ ಚುನಾವಣೆಗಾಗಿ ತಿಂಗಳು ಗಟ್ಟಲೆ ಮೊಕ್ಕಾಂ ಮಾಡಿದ್ದ ಮುಖ್ಯಮಂತ್ರಿಗಳು ಉತ್ತರ ಕರ್ನಾಟಕದ ಭೀಕರ ಬರದ ಪರಿಶೀಲನೆಗೆ ಒಂದು ದಿನವೂ ಬರದೇ ಇರುವುದು ಕೂಡ ತೀವ್ರ ಟೀಕೆಗೆ ಗುರಿಯಾಗಿತ್ತು. ಜೊತೆಗೆ ಪರಸ್ಪರ ಕಿತ್ತಾಟದಲ್ಲಿ ತೊಡಗಿದ್ದ ಮೈತ್ರಿ ಪಕ್ಷಗಳು ಬರ ಪರಿಸ್ಥಿತಿ ನಿಣಾಯಿಸಲು ಮಹತ್ವ ನೀಡಲಿಲ್ಲ. ಇದರ ಪರಿಣಾಮ ಉತ್ತರ ಕರ್ನಾಟಕದಲ್ಲಿ ಕಾಂಗ್ರೆಸ್ ಮೇಲೆ ಆಯಿತು.

ಹೊಸ ದಿಗಂತ
ಕ್ಲಾಸಿಫೈಡ್ ಜಾಹೀರಾತು ನೀಡಲು ಸಂಪರ್ಕಿಸಿ: 88612 09123
ಕ್ಲಾಸಿಫೈಡ್ಸ್

ಅಕ್ಷಯ ಚಿನ್ನ ಬೆಳ್ಳಿ ಪ್ರೈ. ಲಿ.
ಅಕ್ಷಯ ಗೋಲ್ಡ್ ಕಂಪನಿ
ನಿಮ್ಮ ಹಳೆಯ ಚಿನ್ನದ ಮಾರಾಟ ಇಂದಿನ ಮಾರುಕಟ್ಟೆ ಬೆಲೆಗೆ
WE BUY YOUR GOLD INSTANT CASH FOR YOUR GOLD
BRANCHES ALL OVER KARNATAKA
CALL NOW
8880 140 140

TRAINEE URGENTLY REQUIRED
Captain, Stewards, Chef/cook, Supervisor for reputed Restaurant.
Salary+Commission.
Contact- 8867653159, 7989237433

Failed Students dont worry! Join College immediately without wasting this precious year.
Continue / Complete your dream Degree / Course in Government/ DECI UGC Approved / Recognised Universities and get Employed.
Great Opportunity for Women to become succesful Teachers in Branded Schools.
Please enroll today for AIECCE, IAO, Houston (USA) Accredited NTT Course and get your dreams fulfilled.
Ask for SPECIAL B.Ed Course Package.
For more details contact: 93412 73990

ಪಟಾಪಟ್ ಸಾಲ!
ಆಸ್ತಿ, ವೈಯಕ್ತಿಕ, ವಿದ್ಯಾಭ್ಯಾಸ, ವ್ಯವಹಾರ, ಕೃಷಿ ಮತ್ತು ಯೋಜನಾ ಸಾಲಗಳು
ಫ್ರಾಂಚೈಸಿ ಆಗಿ ಸೇರಿರಿ ಮತ್ತು ನಮ್ಮೊಂದಿಗೆ ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಿ
8054959595

## ಸುಪ್ರೀಂನಲ್ಲಿ ಎತ್ತಿನಹೊಳೆ ಕಾನೂನು ಸಮರ

**ಉಡುಪಿ:** ಶತಾಯ ಗತಾಯ ಎತ್ತಿನಹೊಳೆ ಯೋಜನೆಯನ್ನು ಅನುಷ್ಠಾನಿಸಲು ಮುಂದಾಗಿರುವ ರಾಜ್ಯ ಸರಕಾರ 'ಕುಡಿಯುವ ನೀರು' ಯೋಜನೆ ಹೆಸರಿನಲ್ಲಿ ಎಲ್ಲ ಕಡೆಗಳಲ್ಲಿಯೂ 'ವಿನಾಯಿತಿ' ಪಡೆ ಯುತ್ತಿದೆ. ಆದರೆ ಪಶ್ಚಿಮಘಟ್ಟದಲ್ಲಿ ಪರಿಸರ ಮತ್ತು ಜೀವವೈವಿಧ್ಯವನ್ನು ನಾಶ ಮಾಡಿರುವ ಯೋಜನೆಯ ವಿರುದ್ಧ ಪರಿಸರ ಹೋರಾಟಗಾರರು ಸುಪ್ರೀಂ ಕೋರ್ಟ್ ನಲ್ಲಿ ಕಾನೂನು ಹೋರಾಟ ನಡೆಸಲು ಮುಂದಾಗಿದ್ದಾರೆ.

ಬೆಂಗಳೂರಿನ ಕೆ.ಎನ್. ಸೋಮಶೇಖರ್ ಅವರು ಮುಂದಿನ 30 ದಿನಗಳಲ್ಲಿ ಎನ್‌ಜಿಟಿ ತೀರ್ಪಿನ ಬಗ್ಗೆ ಸುಪ್ರೀಂ ಕೋರ್ಟ್ ಗೆ ಮೇಲ್ಮನವಿ ಸಲ್ಲಿಸಲು ಸಿದ್ಧತೆಗಳನ್ನು ನಡೆಸುತ್ತಿದ್ದಾರೆ. ಎನ್‌ಜಿಟಿಯಲ್ಲಿ ಕೇವಲ ಪರಿಸರಕ್ಕೆ ಸಂಬಂಧಿಸಿದ ವಿಚಾರಗಳ ಕುರಿತು ತಕರಾರು ಸಲ್ಲಿಸಲು ಅವಕಾಶವಿತ್ತು. ಆದರೆ ಸುಪ್ರೀಂ ಕೋರ್ಟ್‌ನಲ್ಲಿ ಪರಿಸರದ ಜೊತೆ ಯಲ್ಲಿ ತಾಂತ್ರಿಕ ಲೋಪದೋಷಗಳು, ಆರ್ಥಿಕ, ಭ್ರಷ್ಟಾಚಾರ ಮುಂತಾದ ಅಕ್ರಮಗಳ ಬಗ್ಗೆಯೂ ಪ್ರಶ್ನಿಸುವುದಕ್ಕೆ ಅವಕಾಶವಿದೆ. ಈ ಎಲ್ಲ ನೆಲೆಯಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾ ಗುವುದು ಎಂದು ಸೋಮಶೇಖರ್ 'ಹೊಸದಿಗಂತ'ಕ್ಕೆ ತಿಳಿಸಿದ್ದಾರೆ.

**ಎನ್‌ಜಿಟಿಯಿಂದ ಷರತ್ತು ಬದ್ಧ ಅನುಮತಿ:** ಯೋಜನೆಗೆ ಪರಿಸರ ಅನುಮೋದನೆಯನ್ನು ನೀಡಿರುವ ಅರಣ್ಯ ಸಚಿವಾಲಯದ ಕ್ರಮವನ್ನು ಪ್ರಶ್ನಿಸಿ ಹಾಗೂ ಯೋಜನೆ ಮುಂದುವರಿಸಲು ಅವಕಾಶ ಕೊಡಬಾರದು ಎಂದು ಕೆ.ಎನ್. ಸೋಮ ಶೇಖರ್ ಮತ್ತು ಹಾಸನದ ಎಚ್.ಎ. ಕಿಶೋರ್ ಕುಮಾರ್ ತಕರಾರು ಅರ್ಜಿಗಳನ್ನು ಸಲ್ಲಿಸಿದ್ದರು. ದಿಲ್ಲಿಯ ಎನ್‌ಜಿಟಿ ಅಧ್ಯಕ್ಷ ನ್ಯಾ. ಆದರ್ಶಕುಮಾರ್ ಗೋಯೆಲ್, ನ್ಯಾ. ಎಸ್.ಪಿ. ವಾಂಗ್ದಿ, ನ್ಯಾ. ರಾಮಕೃಷ್ಣನ್ ಮತ್ತು ತಜ್ಞ ಸದಸ್ಯ ನಾಗಿನ್ ನಂದಾ ಅವರಿದ್ದ ಪ್ರಧಾನ ಪೀಠವು ಅರ್ಜಿಗಳ ಅಂತಿಮ ವಿಚಾರಣೆ ನಡೆಸಿ, ವಾದ-ಪ್ರತಿವಾದ ಆಲಿಸಿ ತೀರ್ಪನ್ನು ಕಾಯ್ದಿರಿಸಿತ್ತು. ಶುಕ್ರವಾರ ಅರ್ಜಿಗಳನ್ನು ವಜಾ ಗೊಳಿಸಿದ ಎನ್‌ಜಿಟಿ ಷರತ್ತು ಬದ್ಧ ಅನುಮತಿ ನೀಡಿ 33ಪುಟಗಳ ತೀರ್ಪು ಪ್ರಕಟಿಸಿದೆ.

ಎತ್ತಿನಹೊಳೆ ಯೋಜನೆಯನ್ನು ಜಲ ವಿದ್ಯುತ್ ವಿದ್ಯುತ್ ಕೇಂದ್ರವನ್ನಾಗಿ ಪರಿವರ್ತಿಸುವುದಿಲ್ಲ. ಅಲ್ಲದೇ ಇದು ನೀರಾವರಿ ಯೋಜನೆ ಅಲ್ಲ. ಕುಡಿಯುವ ನೀರಿನ ಉದ್ದೇಶಕ್ಕಾಗಿ ಮಾತ್ರ ಬಳಸು ತ್ತೇವೆ ಎಂದು ಯೋಜನೆಯನ್ನು ಅನುಷ್ಠಾನ ಗೊಳಿಸುತ್ತಿರುವ ಕರ್ನಾಟಕ ಸರಕಾರ ಮುಚ್ಚಳಿಕೆ ಬರೆದುಕೊಟ್ಟಿದೆ. ಜೊತೆಗೆ ಇದು ಪರಿಸರ ಪರಿಣಾಮ ಅಧ್ಯಯನ (ಇಐಎ) ಅಧಿಸೂಚನೆ 2006ಕ್ಕೆ ಒಳಪಡುವುದಿಲ್ಲ, ಹಾಗಾಗಿ ಪರಿಸರ ಅನುಮೋದನೆ ಅಗತ್ಯ ವಿಲ್ಲವೆಂದು 2013ರ ಮಾ.28ರಂದು ಕೇಂದ್ರ ಅರಣ್ಯ ಮತ್ತು ಪರಿಸರ ಹಾಗೂ ಹವಾಮಾನ ವೈಪರೀತ್ಯ ಸಚಿವಾಲಯ ಹೇಳಿರುವುದರಲ್ಲಿ ತಪ್ಪಿಲ್ಲ ಎಂದು ನ್ಯಾಯಪೀಠ ಹೇಳಿದೆ.

ಯೋಜನೆಯಿಂದ ಪಶ್ಚಿಮ ಘಟ್ಟದ ಮೇಲಾ ಗುವ ಪರಿಣಾಮ ಪರಿಶೀಲಿಸಲಾಗಿದೆ. ನೀರಿನ ಕೊರತೆ ಅನುಭವಿಸುತ್ತಿರುವ ಪ್ರದೇಶ ಗಳಿಗೆ ಕುಡಿಯುವ ನೀರು ಒದಗಿಸುವ ಯೋಜನೆ ಇದಾಗಿರುವುದರಿಂದ ಆ ಸಂಕಷ್ಟ ಒಪ್ಪಬೇಕಾಗಿದೆ. ಅಲ್ಲದೇ 2015ರಲ್ಲಿ ಪಶ್ಚಿಮ ಘಟ್ಟ ಸಂರಕ್ಷಣೆ ಕುರಿತಂತೆ ಡಾ. ಕೆ.ಕಸ್ತೂರಿ ರಂಗನ್ ನೇತೃತ್ವದ ಸಮಿತಿ ನೀಡಿರುವ ವರದಿಯಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ಯಾವುದೇ ನಿರ್ಬಂಧವಿಲ್ಲ, ಪ್ರಾದೇಶಿಕ ಉನ್ನತಾಧಿಕಾರ ಸಮಿತಿ ಕೂಡ ಯೋಜನೆಗೆ ಅನುಮತಿ ನೀಡಿದೆ. ಅರ್ಜಿದಾರರು ಕೆಲವು ಖಾಸಗಿ ಸಂಸ್ಥೆಗಳು ನಡೆಸಿದ ಅಧ್ಯಯನದಲ್ಲಿ ಯೋಜನೆ ಕಾರ್ಯ ಸಾಧುವಲ್ಲ ಎಂದು ಹೇಳಿರುವುದನ್ನು ಒಪ್ಪಲಾಗದು. ಹಾಗಾಗಿ ಅರ್ಜಿಗಳಲ್ಲಿ ಯಾವುದೇ ಅರ್ಹತೆ ಇಲ್ಲ ಎಂಬ ಅಭಿಪ್ರಾಯಕ್ಕೆ ಬಂದು ವಜಾಗೊಳಿಸುತ್ತಿರುವುದಾಗಿ ತಿಳಿಸಿದೆ.

## ಸಿಎಂ ಸ್ಥಾನಕ್ಕೆ ರಾಜೀನಾಮೆ ಬಯಸಿದ್ದೆ

**ಹೊಸದಿಲ್ಲಿ:** ಲೋಕಸಭೆ ಚುನಾವಣೆಯಲ್ಲಿ ಪಕ್ಷ ಭಾರಿ ಹಿನ್ನಡೆ ಅನುಭವಿಸಿದ ಹಿನ್ನೆಲೆ ರಾಹುಲ್ ಗಾಂಧಿ ಅಧ್ಯಕ್ಷ ಸ್ಥಾನಕ್ಕೆ ಮುಂದಾಗಿದ್ದು, ಪಕ್ಷದ ಮುಖಂಡರು ಬೇಡ ಎಂದಿರುವ ಪ್ರಹಸನ ನಡೆದ ಬೆನ್ನಲ್ಲೇ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸಹ ತಮ್ಮ ಸಿಎಂಸ್ಥಾನಕ್ಕೆ ರಾಜೀನಾಮೆ ನೀಡಲು ನಿರ್ಧರಿಸಿದ್ದೆ ಎಂದಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಟಿಎಂಸಿ ಕಡಿಮೆ ಸೀಟು ಗೆದ್ದ ಕಾರಣ ಶನಿವಾರ ಟಿಎಂಸಿ ಆತ್ಮಾವಲೋಕನ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ನಾನೇನೋ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಲು ಇಚ್ಛಿಸಿದ್ದೆ. ಆದರೆ ಪಕ್ಷವು ನನ್ನ ರಾಜೀನಾಮೆ ತಿರಸ್ಕರಿಸಿತು. ಹಾಗಾಗಿ ನಾನೇ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತೇನೆ ಎಂದು ತಿಳಿಸಿದ್ದಾರೆ. ಮುಖ್ಯಮಂತ್ರಿ ಗಾದಿ ನನಗೆ ಮುಖ್ಯವಲ್ಲ. ತೃಣಮೂಲ ಕಾಂಗ್ರೆಸ್ಸಿನ ಚಿಹ್ನೆ ಯಾವಾಗಲೂ ನನಗೆ ಆದ್ಯತೆ. 6 ತಿಂಗಳಿಂದ ನಾನು ಸರಿಯಾಗಿ ಕೆಲಸ ಸಹ ಮಾಡಿರಲಿಲ್ಲ. ಹಾಗಾಗಿ ರಾಜೀನಾಮೆಗೆ ನಿರ್ಧರಿಸಿದ್ದೆ ಎಂದಿದ್ದಾರೆ. ಮತಯಂತ್ರದ ಕುರಿತು ಅನುಮಾನ ವ್ಯಕ್ತಪಡಿಸಿದ ಮಮತಾ, ಬಹುತೇಕ ರಾಜ್ಯಗಳಲ್ಲಿ ಬಿಜೆಪಿ ಅಧಿಕ ಸೀಟು ಗೆದ್ದಿರುವುದು ಶಂಕಾಸ್ಪದವಾಗಿದೆ. ಇದರ ಹಿಂದೆ ವಿದೇಶದ ಕೈಗಳ ಕುತಂತ್ರವೂ ಇದೆ ಎಂದು ಆರೋಪಿಸಿದ್ದಾರೆ.

## ಸಿಡಿಲು ಬಡಿದು ನಾಲ್ವರಿಗೆ ತೀವ್ರ ಗಾಯ

**ಮೈಸೂರು:** ಸಿಡಿಲ ಬಡಿತಕ್ಕೆ ನಾಲ್ವರು ತೀವ್ರವಾಗಿ ಗಾಯಗೊಂಡು ಅಸ್ವಸ್ಥರಾಗಿರುವ ಘಟನೆ ಮೈಸೂರು ಜಿಲ್ಲೆಯ ಎಚ್.ಡಿ ಕೋಟೆ ತಾಲೂಕಿನ ಚಿಕ್ಕದೇವಮ್ಮನ ಬೆಟ್ಟದಲ್ಲಿ ನಡೆದಿದೆ. ಪುಟ್ಟೀರಯ್ಯ (40), ಶಂಕರ (37), ಸ್ವಾಮಿ (36), ರಂಗಯ್ಯ (35) ಸಿಡಿಲಬಡಿತದಿಂದ ಗಾಯಾಗೊಂಡವರು. ಎಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ನೀಡಲಾಗುತ್ತಿದೆ. ಗಾಯಾಳುಗಳು ದೇಬೂರು ಗ್ರಾಮದವರಾಗಿದ್ದು ಆಗಮಿಸಿ ಪೂಜೆ ಸಲ್ಲಿಸಿ ವಾಪಸ್ಸು ತೆರಳುವಾಗ ಈ ಘಟನೆ ನಡೆದಿದೆ.

{xelp}

**XELPMOC DESIGN AND TECH LIMITED**

CIN: U72200KA2015PLC082873
Registered Office: #17, 4th Floor, Agies Building, 1st 'A' Cross, 5th Block, Koramangala, Bengaluru – 560 034, Karnataka, India. Tel. No: 080 4370 8360; E-mail: vaishali.kondbhar@xelpmoc.in; Website: www.xelpmoc.in

**STATEMENT OF FINANCIAL RESULTS FOR THE QUARTER AND YEAR ENDED MARCH 31, 2019**

(Rupees in 1000's except per share data)

| Sr. No. | Particulars | Standalone | | | | Consolidated | |
|---|---|---|---|---|---|---|---|
| | | Quarter ended March 31, 2019 (Unaudited) | Quarter ended March 31, 2018 (Unaudited) | Year ended March 31, 2019 (Audited) | Year ended March 31, 2018 (Audited) | Year ended March 31, 2019 (Audited) | Year ended March 31, 2018 (Audited) |
| 1 | Income from operations | 14,632.02 | 28,092.60 | 60,886.95 | 53,601.34 | 60,886.95 | 53,601.34 |
| 2 | Net profit for the period (before tax, Exceptional and/or Extraordinary items) | (12,981.06) | (10,869.07) | (49,986.22) | (35,262.55) | (50,425.78) | (34,931.37) |
| 3 | Net profit for the period before tax (after Exceptional and/or Extraordinary items) | (12,981.06) | (10,869.07) | (49,986.22) | (35,262.55) | (50,425.78) | (34,931.37) |
| 4 | Net profit for the period after tax (after Exceptional and/or Extraordinary items) | (12,925.47) | (11,878.19) | (49,399.03) | (36,021.94) | (49,838.59) | (35,690.76) |
| 5 | Total Comprehensive Income for the period [Comprising Profit for the period (after tax) and Other Comprehensive Income (after tax)] | 43,198.61 | (12,321.69) | 7,630.77 | (36,791.10) | 7,191.21 | (36,459.92) |
| 6 | Equity share capital | | | 1,37,052.98 | 65,171.32 | 1,37,052.98 | 65,171.32 |
| 7 | Reserves excluding revaluation reserves as per the balance sheet of the previous year | | | 2,69,480.25 | 1,24,824.05 | 2,69,346.87 | 1,25,130.23 |
| 8 | Earnings per share of (Rs. 10 each) (Not annualised) | | | | | | |
| | a) Basic (Rs.) | (1.20) | (1.32) | (4.59) | (4.01) | (4.63) | (3.97) |
| | b) Diluted (Rs.) | (1.20) | (1.32) | (4.59) | (4.01) | (4.63) | (3.97) |

**Notes:**
1. The above is an extract of the detailed format of unaudited quarterly and audited annual financial results filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the unaudited quarterly and audited annual financial results are available on the websites of the Stock Exchange(s) www.bseindia.com and www.nseindia.com and on the website of the Company www.xelpmoc.in under Investor Relations Section.
2. The statement of unaudited financial results for the quarter and audited financial results for the year ended March 31, 2019 have been reviewed by the Audit Committee and approved by the Board of Directors at their respective meetings held on May 24, 2019 in terms of Regulation 33 of the SEBI (Listing Obligations and Disclosure Requirements) Regulations, 2015.

For and on behalf of the Board of Directors of Xelpmoc Design and Tech Limited
Sd/-
Sandipan Chattopadhyay
Managing Director and Chief Executive Officer
DIN: 00794717

Place: Mumbai
Date: May 24, 2019